ಅಸಲು ದಾವಾ ನಂ. 112/2023
ಪಿ ಡಬ್ಲ್ಯು-1

ದಿನಾಂಕಃ 28-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ- ಪ್ರತಿವಾದಿಯರ ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ.

ನನ್ನ ಹೆಸರು ತವರು ಮನೆಯಲ್ಲಿ ತಂಗೆವ್ವ ಭೀಮಣ್ಣ ಇಚ್ಚಂಗಿ ಅಂತಾ ಇತ್ತು. ಹಾಗೇ ನನ್ನ ಹೆಸರು ತಂಗೆವ್ವ ಭೀಮಣ್ಣ ಇಚ್ಚಂಗಿ ಎಂದು ತೋರಿಸಲು ಈ ದಾವೆಯಲ್ಲಿ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಹಾಗೇ ನಾನು ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿಯ ಬಗ್ಗೆ ಮಾಹಿತಿ ನನ್ನ ತವರು ಮನೆಯಿಂದ ಪಡೆದುಕೊಂಡಿರುತ್ತೇನೆ. 1 ನೇ ಪ್ರತಿವಾದಿಗೆ 2 ಗಂಡು, ಒಂದು ಹೆಣ್ಣು ಮಕ್ಕಳು ಇರುವುದಾಗಿ ಮಾಹಿತಿ ಕೊಟ್ಟಿರುತ್ತೇನೆ. ಹಾಗೇ ನನಗೆ ಮಾಹಿತಿ ಇರುವುದಾಗಿ ಸುಳ್ಳು ಹೇಳುತ್ತಿದ್ದು ಪ್ರತಿವಾದಿ ನಂ.1 ರಿಂದ 3 ರವರು ತಕರಾರು ಸಲ್ಲಿಸಿದ ನಂತರವೇ ನನಗೆ ಮಾಹಿತಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ತಕರಾರಿನಲ್ಲಿ ವಂಶಾವಳಿ ತೋರಿಸಿದ ನಂತರ ಹಾಗೇ 1 ನೇ ಪ್ರತಿವಾದಿಗೆ 2 ಗಂಡು, ಒಂದು ಹೆಣ್ಣು ಮಕ್ಕಳು ಇರುವುದಾಗಿ ಹೇಳುತ್ತಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಕ್ಕಳ ಹೆಸರು ದ್ಯಾಮಣ್ಣ , ಬಸಪ್ಪ ಮತ್ತು ಬಸವಣ್ಣೆವ್ವ ಇರುತ್ತದೆ. 1 ನೇ ಪ್ರತಿವಾದಿ ಹಾಗೇ ವಂಶವಾಳಿಯಲ್ಲಿ ಹೇಳಿದ ಪ್ರಕಾರ ನಾನು 1 ನೇ ಪ್ರತಿವಾದಿಯ ಮಕ್ಕಳ ಹೆಸರು ದ್ಯಾಮಣ್ಣ , ಬಸಪ್ಪ ಮತ್ತು ಬಸವಣ್ಣೆವ್ವ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ದುರುಗವ್ವ ಇವರು ಸಿವಿಲ್ ನ್ಯಾಯಾಲಯದಿಂದ ವಾರಸುದಾರರು ಎಂದು ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಡಿಕ್ರಿಯ ಮೇಲೆ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

2. ದಾವಾ ಆಸ್ತಿಗಳ ಮಾಲೀಕರು ಯಾರು ಇದ್ದರು ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿ ಅನುಕ್ರಮ ನಂ.ಎ ಇದರ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಮನೆ ಇರುತ್ತದೆ. ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿ ಅನುಕ್ರಮ ನಂ.ಬಿ ಇದರ ಪೂರ್ವಕ್ಕೆ ಬೂದಿಹಾಳ ಇವರ ಮನೆ ಇರುತ್ತದೆ. ಪಶ್ಚಿಮಕ್ಕೆ ಲಕ್ಷ್ಮಪ್ಪ ಗುರಣ್ಣನವರ ಇವರ ಮನೆ ಇರುತ್ತದೆ. ದಕ್ಷಿಣ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ.

3. ಪ್ರತಿವಾದಿ ನಂ.2 ಮತ್ತು 3 ಇವರು 1 ನೇ ಪ್ರತಿವಾದಿಯ ಸೊಸೆಯಂದಿರು ಇರುತ್ತಾರೆ. ಹಾಗೇ ಅವರು ಸೊಸೆಯರಾಗಬೇಕು ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಹಾಗೇ ಪ್ರತಿವಾದಿ ನಂ.2 ಮತ್ತು 3 ಇವರು 1 ನೇ ಪ್ರತಿವಾದಿಯ ಸೊಸೆಯಂದಿರು ಎಂದು ಹೇಳಿ ಬರೆಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಉತಾರದಲ್ಲಿ ಇರುವ ಭೀಮಣ್ಣ ಹನುಮಂತಪ್ಪ ಇಚ್ಚಂಗಿ ಇವರು ದಾವಾದ ಆಸ್ತಿಗಳ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲತಃ ನವಾಬರ ಆಸ್ತಿಗಳು ಎಂದರೆ ಸರಿಯಲ್ಲ. ಹಾಗೇ ನವಾಬರು ದಾವಾ ಆಸ್ತಿಗಳನ್ನು ಬಿಟ್ಟು ಹೋಗಿದ್ದರಿಂದ ಅವುಗಳಿಗೆ ವಾರಸುದಾರರು ಇಲ್ಲದೇ ಇದ್ದಿದ್ದರಿಂದ ಸರ್ಕಾರದವರು ಅವುಗಳನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರ್ಕಾರದ ಆಸ್ತಿಗಳು ಆಗಿರುವುದರಿಂದ ಸರ್ಕಾರದವರು ಜನರಿಗೆ ದಾವಾ ಆಸ್ತಿ ಮತ್ತು ಇತರ ಆಸ್ತಿಗಳ ಸಂಬಂಧ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ಸರ್ಕಾರದವರು ಕೊಳಗೇರಿ ಅಭಿವೃದ್ಧಿ ಮಂಡಳಿಯವರು ಪ್ರತಿವಾದಿ ನಂ.2 ಮತ್ತು 3 ಇವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆವಾಗಿನಿಂದ ಪ್ರತಿವಾದಿ ನಂ.2 ಮತ್ತು 3 ಇವರು ಮಂಜೂರು ಮಾಡಿದ ಆಸ್ತಿಗಳಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಕಾಣಿಸಿದ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ದ್ಯಾಮಣ್ಣ, ಬಸಪ್ಪ ಹಾಗೂ ಬಸವಣ್ಣೆವ್ವ ಇವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಭೀಮಣ್ಣನಿಗೆ 1 ನೇ ಪ್ರತಿವಾದಿ ಏಕ ಮಾತ್ರ ವಾರಸುದಾರರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನ ಹೆಸರು ಫಕ್ಕೀರಪ್ಪ ಧಾರವಾಡ ಇರುತ್ತದೆ. ನನ್ನ ಮದುವೆ ಆದ ಬಗ್ಗೆ ಆಮಂತ್ರಣ ಪತ್ರಿಕೆ, ಫೋಟೋ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಮನೆಯ ಮುಂದೆ ಸವಣೂರಿನಲ್ಲಿ ಆಗಿರುವುದಾಗಿ ನುಡಿಯುತ್ತಾರೆ. ನನ್ನ ತಂದೆಯೊಂದಿಗಿನ ಕುಟುಂಬ ಫೋಟೋ ಹಾಜರುಪಡಿಸಿರುತ್ತೇನೆ. ಆ ಫೋಟೋದಲ್ಲಿ 1 ನೇ ಪ್ರತಿವಾದಿ ಸಹ ಇದ್ದರು. ನಿಪಿ-13 ಮದುವೆ ಸಮಾರಂಭದ ಫೋಟೋ ಅಲ್ಲ ಎಂದರೆ ಸರಿ. ನಾನು ಶಾಲೆ ಕಲಿತಿಲ್ಲ. ನನ್ನ ತಂದೆ ಕುಟುಂಬ ಪಡಿತರ ಚೀಟಿ ಹೊಂದಿದ್ದರು. ಆ ಚೀಟಿಯಲ್ಲಿ ನನ್ನ ಹೆಸರು ಕುಟುಂಬದ ಸದಸ್ಯರು ಅಂತಾ ಇತ್ತು. ಸದರಿ ಪಡಿತರ ಚೀಟಿಯನ್ನು ನಾನು ಹಾಜರುಪಡಿಸಿಲ್ಲ. ನನ್ನ ತಂದೆ ನನಗೆ ಅದನ್ನು ಕೊಟ್ಟಿಲ್ಲ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ನಾನು ಪಡಿತರ ಚೀಟಿಯ ದೃಢೀಕೃತ ನಕಲು ಪಡೆದು

ಹಾಜರುಪಡಿಸಿಲ್ಲ. ನನ್ನ ಮದುವೆ ಆದಾಗ ನನಗೆ 16 ವರ್ಷ ವಯಸ್ಸು ಆಗಿತ್ತು. ನಾನು ಬಾಳುವೆ ಮಾಡಲು ಯಾವ ವರ್ಷ ಹೋಗಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ಭೀಮಣ್ಣಾ ಇವರ ಮಗಳು ಎಂದು ತೋರಿಸಲು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ಭೀಮಣ್ಣಾ ಮತ್ತು ದುರುಗವ್ವ ದಂಪತಿಗಳಿಗೆ 3 ಮಕ್ಕಳು ಇರುತ್ತಾರೆ. ಯಲ್ಲಮ್ಮ, ನಾನು ಮತ್ತು ಕಮಲವ್ವ ಇರುತ್ತೇವೆ. ಹಾಗೇ ನಾವೆಲ್ಲರೂ ಯಾವ ದಿವಸ ಜನಿಸಿರುತ್ತೇವೆ ಎಂದು ಹೇಳಲು ಬರುವುದಿಲ್ಲ. ಯಲ್ಲಮ್ಮ ಇವರನ್ನು ಭೀಮಣ್ಣಾ ಮೆಳ್ಳಳ್ಳಿ ಎಂಬುವವರೊಂದಿಗೆ ವಿವಾಹ ಆಗಿತ್ತು. ಅವರಿಗೆ ಮಕ್ಕಳು ಆಗಿಲ್ಲ. ಭೀಮಣ್ಣಾ ಈಗ ಜೀವಿತ ಇಲ್ಲ. ಯಲ್ಲಮ್ಮ ಸಹ ತೀರಿಕೊಂಡಿರುತ್ತಾರೆ. ಯಲ್ಲಮ್ಮ ಮತ್ತು ಭೀಮಣ್ಣಾ ಇವರ ಮರಣ ದಾಖಲೆ ಹಾಜರುಪಡಿಸಿಲ್ಲ. ಭೀಮಣ್ಣಾನಿಗೆ ನಾನಾಗಲೀ, ಯಲ್ಲಮ್ಮ , ಇವರಾಗಲೀ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಭೀಮಣ್ಣಾ ಇಚ್ಚಂಗಿ ಮತ್ತು ದುರುಗವ್ವ ಇಚ್ಚಂಗಿ ಇವರಿಗೆ 1 ನೇ ಪ್ರತಿವಾದಿ ಮಾತ್ರ ಮಗಳು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).